ಹೊಂಡಾ ಅಕಾರ್ಡ್
ಜಪಾನ್
ನಿಸಾನ್
ಜಪಾನ್
ಟೆಸ್ಲಾ
ಗೊತ್ತಿಲ್ಲ.

ಅಂದವನೇ ಸಂಜು 'ನಾಲ್ಕು ಕಾರುಗಳಲ್ಲಿ ಮೂರು ಜಪಾನದ್ದು. ನಾ ದೊಡ್ಡವಾದ ಮೇಲೆ ಜಪಾನಕ್ಕೇ ಹೋಗ್ತೀನಿ' ಅಂತ ಕುಣಿದ. 'ಮಗನೇ ಕಾರ್ ಜಪಾನದ್ದು ಇದ್ದರೇನಾಯ್ತು ಒಡ್ಡವರು ಅಮೆರಿಕನ್ನರೇ' ಅಂದ ಅವಿನಾಶ ಬಾಕಿ ಪೇಪರಿನ ಕೆಳಗಿದ್ದ ಕ್ಯಾಡಬರಿಯನ್ನು ತನ್ನ ಶಾರ್ಟ್ಸ್ ನ ಜೋಬಿನೊಳಗೆ ಬಚ್ಚಿಟ್ಟುಕೊಂಡ.

'ಅಣ್ಣಾ ಅವ್ವ ಕರೀಲಿಕತ್ತಾಳ ಡಬ್ಬಿ ಕೊಟ್ಟವನೇ ಬರಬೇಕಂತ.....'ಕೂಗುತ್ತಾ ಸಂಜೂನ ಹಿಂದೆಯೇ ಬಂದಿದ್ದ ಅವನ ಏಳರ ತಂಗಿ ಪುಟ್ಟಿ ಇಷ್ಟೊತ್ತೂ ಸುಮ್ಮನಿದ್ದವಳು

'ಖರೆ, ಅಮೆರಿಕಾಕ್ಕ ನೀ ಯಾಕ ಹೊಂಟೀ ಅವಿ ಕಾಕಾ?' ಅಂದಳು.

ಅವಿನಾಶ 'ಅದು ಯಾಕಂದ್ರ...ಯಾಕಂದ್ರ.....' ಅನ್ನುತ್ತ ಮುಂದೆ ಮಾತಾಡಲು ತಿಳಿಯದೇ ಸುಮ್ಮನಾದ. ಸಂಜೂನೇ, 'ಏ ಪುಟ್ಟಿ ಒಂದು ಡಾಲರ್ ಕಿಮ್ಮತ್ತು ಗೊತ್ತದೇನು ನಿನಗ? ಎಂಬತ್ತೈ....ದು ರೂಪಾಯಿ. ಯಾರರೇ ಒಂದು ರೂಪಾಯಿ ಕೊಡೋವಲ್ಲಿ ಎಂಬತ್ತೈದು ರೂಪಾಯಿ ಕೊಟ್ಟರ ನೀ ಕುಣಕೋತ ಅವರು ಕರದಲ್ಲಿ ಹೋಗ್ತಿಯಿಲ್ಲೋ?' ಅಂದ.

ಅವಳು, 'ಇಲ್ಲಪ್ಪ ನಾ ಅವ್ವನ್ನ ಬಿಟ್ಟು ಎಲ್ಲೂ ಹೋಗಂಗಿಲ್ಲ' ಅಂದವಳೇ ಓಡಿಹೋಗಿಬಿಟ್ಟಳು.

'ಕಾಕಾ ಕ್ಯಾಡಬರಿ ಲಗು ಕೊಡು. ನಾನೂ ಹೋಗ್ಬೇಕು' ಸಂಜು ದುಂಬಾಲು ಬಿದ್ದ

'ಹೋಗೋ ಹೋಗು, ಟೆಸ್ಲಾ ಕಂಪನಿ ಅಮೆರಿಕಾದ್ದು ಅನ್ನೋ ಮುಖ್ಯ ಉತ್ತರಾನೇ ಕೊಡಲಿಲ್ಲ ಅಂದಮೇಲೆ ಕ್ಯಾಡಬರಿ ಗೀಡಬರಿ ಏನೂ ಇಲ್ಲ ಓಡು ಮನಿಗೆ' ಅವಿನಾಶನೆಂದ. ಹುಡುಗ ಪೆಚ್ಚಾಗಿ ಓಡಿ ಹೋದ.

'ನನಗೆ ಆರಿಝೋನಾ ಯುನಿವರ್ಸಿಟಿ ಕೊಡೋದು ಹದಿನೆಂಟ್ಸೂರು ಡಾಲರ್ ಸ್ಟುಡೆಂಟ್ ಶಿಪ್, ಹದಿನೆಂಟು ಗುಂಡ್ಲೆ ಎಂಬತ್ತೈದು ಅಂದರೆ ಸುಮಾರು ಒಂದೂವರೆ ಲಕ್ಷ – ಇನ್ನು ಮೇಲೆ ಕೇಳಿದವರಿಗೆಲ್ಲ ಡಾಲರ್ ಗಿಂತಾ ರೂಪಾಯಿಯಲ್ಲೇ ಸ್ಟೂಡೆಂಟ ಶಿಪ್ ನ ಹಣ ಹೇಳ್ಬೇಕು' ಅಂದುಕೊಂಡ. ಅದೇ ಖುಷಿಯಲ್ಲಿ ತನ್ನ ಮೊಬೈಲ್ ಡಿ ಪಿ ಯನ್ನು 'ಐ ಲವ್ ಯು ಎಸ್ ಎ' ಅಂತ ಬರೆದಿದ್ದ ಟೀಶರ್ಟಿನಲ್ಲಿದ್ದ ಫೋಟೋಗೆ ಬದಲಾಯಿಸಿ 'ಇಂಡಿಯಾ ಆಜ್' ವಾರ್ತೆ ಶುರು ಮಾಡಿ ಸೋಫಾಸೀನನಾದ. ಚೀನದ ವುಹಾನ್ ವೈರಸ್ ನ ಸುದ್ದಿ ಬರ್ತಿತ್ತು, ಹದಿನೈದು ದಿನಗಳಿಂದ ಅದೇ ಸುದ್ದಿ ಕೇಳಿ ಕೇಳಿ ಬೇಜಾರಾಗಿಹೋಗಿದ್ದರಿಂದ ಚಾನೆಲ್ ಬದಲಾಯಿಸಿ ನೋಡಿದ, ಎಲ್ಲ ಸುದ್ದಿವಾಹಿನಿಗಳಲ್ಲೂ ಅದೇ ವಾರ್ತೆ! ಹಾಗೆಯೇ ಅರೆಗಣ್ಣು ಮುಚ್ಚಿಕೊಂಡು ಹಿಂದಕ್ಕೆ ತಲೆಯಾನಿಸಿ ಕೂತ.

ದೂರ ಇರೋದನ್ನು ರಿಹರ್ಸಲ್ ಮಾಡ್ಕೋತಿದ್ದಾಳೇನೋ ಎಂಬಂತೆ ಇವನತ್ತ ಒಮ್ಮೆ ಕೂಡಾ ನೋಡದೇ ಅಡುಗೆಮನೆ- ವೆರಾಂಡಾ ಅಂತ ಓಡಾಡುತ್ತಿದ್ದ ಮಧು ಒಮ್ಮೆಲೆ

'ಪ್ಲೇಟ್ ಹೊಂದಸ್ರೀ ಅಡುಗೆ ಆಗೇದ' ಅಂತ ಒದರಿದಾಗ ಅವಿನಾಶ ಗಡಬಡಿಸಿ ಎದ್ದ.

ಅನ್ನದ ಮೊದಲು ತುತ್ತು ಕಲಿಸಿದ್ದನೋ ಇಲ್ಲ 'ಇಂಡಿಯಾ ಆಜ್' ವಾಹಿನಿಯ ಮೇಲೆ ಒಮ್ಮೆಲೆ ಮೋದೀಜಿ ಬಂದಿದ್ದರು. ಕೈಯೆತ್ತಿ ಆಕಾಶಕ್ಕೆಂಬಂತೆ ಮುಗಿದು ಮಾತನಾಡಹತ್ತಿದರು- 'ನಾಳೆ ಮಾರ್ಚ ಇಪ್ಪತ್ತೈದರಿಂದ ಇಡೀ ದೇಶದಲ್ಲಿ ಜನತಾ ಕರ್ಫ್ಯೂ ಲಾಗೂ, ಪೂರಾ ಭಾರತ್ ಬಂದ್, ಎಲ್ಲ ಸ್ಕೂಲ್ ಕಾಲೇಜ್ ಬಂದ್, ರಾಜ್ಯ- ಕೇಂದ್ರ ಸರಕಾರಿ ಆಫೀಸ್‌ಗಳು, ರೇಲ್ವೆ ಸೇವೆ, ವಿಮಾನ ಸೇವೆ ಎಲ್ಲ ಬಂದ್ .....ನಾವೆಲ್ಲ ಒಂದಾಗಿ ಈ ಆಪತ್ ಪರಿಸ್ಥಿತಿಯನ್ನು ಎದುರಿಸೋಣ, ಸಬ್ ಸುರಕ್ಷಿತ್ ರಹಿಯೇ.... ಘರ ಮೇ ರಹಿಯೇ...... ಕಹೀ ಬಾಹರ್ ಮತ್ ಜಾಯಿಯೇ.....'

ತಾ ಕುಳಿತ ಕುರ್ಚಿಯ ಕಾಲಿಗೆ ಇದೀಗ ಜೇಡ ಕಟ್ಟಿದ್ದ ಹೊಚ್ಚ ಹೊಸ ಬಲೆಯಲ್ಲಿ ಸೊಳ್ಳೆಯೊಂದು ಸಿಕ್ಕಿ ವಿಲ ವಿಲ ಒದ್ದಾಡುವುದನ್ನೇ ದಿಟ್ಟಿಸುತ್ತಿದ್ದ ಅವಿನಾಶನ ಪಕ್ಕಕ್ಕೆ ಬಂದು ನಿಲ್ಲುತ್ತಾ ಮಧು 'ಕೈ ಒಣಗಿ ಹೋಗ್ತದ ಮುಂಚೆ ಊಟ ಮಾಡ್ರಿ' ಅಂತ ಮೃದುವಾಗಿ ಎಚ್ಚರಿಸಿದಳು; ಟಿವಿ ಪರದೆಯ ಬೆಳಕು ಅವಳ ಆರ್ದ್ರ ಕಣ್ಣಲ್ಲಿ ಮಿಂಚಿತು.

●